**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಉತ್ತರ**

---

**ವಿಷಯ:** ಮೈಸೂರಿನಲ್ಲಿ ಡ್ರಗ್ಸ್ ಮಾಫಿಯಾ, ಮಾದಕ ವಸ್ತು ಸೇವನೆ ಪ್ರಕರಣದ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್(ಎಬಿವಿಪಿ) ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿರುವ ವಿಚಾರ ದಿನಾಂಕ 13.08.2025ರ ದಿನಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

**"ಡ್ರಗ್ಸ್ ನಿರ್ಮೂಲನೆಗಾಗಿ ನಶೆಮುಕ್ತ ಕ್ಯಾಂಪಸ್"** ಅಭಿಯಾನದಡಿಯಲ್ಲಿ ಸಾವಿರಾರು ವಿದ್ಯಾರ್ಥಿ ಸಮೂಹ ಪ್ರತಿಭಟನೆ ಹಮ್ಮಿಕೊಂಡಿತ್ತು. ಸಾಂಸ್ಕೃತಿಕ ನಗರಿ ಮೈಸೂರು, ಇತ್ತೀಚೆಗೆ ಮಾದಕ ವ್ಯಸನ ಮತ್ತು ಡ್ರಗ್ಸ್ ಜಾಲದ ಕೇಂದ್ರವಾಗಿ ಮಾರ್ಪಟ್ಟಿರುವುದು ತೀವ್ರ ಆತಂಕಕಾರಿಯಾದ ವಿಷಯವಾಗಿದೆ. ಮಾದಕ ವ್ಯಸನವು ಯುವಜನತೆ ಮತ್ತು ವಿದ್ಯಾರ್ಥಿಗಳ ಭವಿಷ್ಯವನ್ನು ನಾಶಪಡಿಸುತ್ತಿದ್ದು, ಈ ವಸ್ತುಗಳ ಸುಲಭ ಲಭ್ಯತೆಯು ದುಷ್ಕಟಕ್ಕೆ ಬಲಿಪಶುಗಳಾಗುವಂತೆ ಮಾಡುತ್ತಿದೆ. ಇದರಿಂದಾಗಿ ಅಪರಾಧ ಚಟುವಟಿಕೆಗಳು ಹೆಚ್ಚಾಗುತ್ತಿರುವುದು ದುರ್ದೈವದ ಸಂಗತಿಯಾಗಿದೆ.

ರಾಜ್ಯದಲ್ಲಿ ಮಾದಕ ವಸ್ತುಗಳ ಉತ್ಪಾದನೆ, ಮಾರಾಟ ಮತ್ತು ಬಳಕೆ ತಡೆಯುವ ನಿಟ್ಟಿನಲ್ಲಿ ಪ್ರತ್ಯೇಕವಾಗಿ ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ ಘಟಕವನ್ನು ಸರ್ಕಾರ ರಚಿಸಿ ಆದೇಶ ಹೊರಡಿಸಿದೆ. ಘಟಕಕ್ಕೆ ಸೂಕ್ತ ವ್ಯಕ್ತಿ ಮತ್ತು ಅಗತ್ಯ ಸೌಕರ್ಯಗಳನ್ನು ಒದಗಿಸಿದಾಗ ಮಾತ್ರ ಡ್ರಗ್ಸ್ ಪೆಡ್ಲರ್ಸ್, ಡ್ರಗ್ಸ್ ತಯಾರಕರು ಮತ್ತು ಅವರ ಹಿಂದಿರುವ ದೊಡ್ಡ ಶಕ್ತಿಗಳನ್ನು ಮುಲಾಜಿಲ್ಲದೆ ಮಟ್ಟ ಹಾಕುವುದಕ್ಕೆ ಮತ್ತು ನಿಯಂತ್ರಿಸುವುದಕ್ಕೆ ಸಾಧ್ಯವಾಗಲಿದೆ.

ಮೈಸೂರಿನಲ್ಲಿ ತಯಾರಾದ ಮಾದಕ ವಸ್ತುವಿಗೆ ಮಾಹಾರಾಷ್ಟ್ರದ ನಂಟು ಪತ್ತೆಯಾಗಿರುವುದು ಜನರ ಆತಂಕಕ್ಕೆ ಕಾರಣವಾಗಿದ್ದು, ಬುಡ ಸಮೇತ ಇಂತಹ ಜಾಲಗಳನ್ನು ಕಿತ್ತು ಬಿಸಾಕುವಂತಹ ನಿಟ್ಟಿನಲ್ಲಿ ದಕ್ಷ ಅಧಿಕಾರಿಗಳನ್ನು ಕಾರ್ಯಪಡೆ ಘಟಕಕ್ಕೆ ನೇಮಿಸಿ ತೀವ್ರತರವಾದ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಮಾನ್ಯ ಗೃಹ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:**

ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿಯನ್ನು ಹೊರ ರಾಜ್ಯದ ಪೊಲೀಸರು ಬೇಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಮುಂಬೈ ನಗರದ ಸಾಕಿನಾಕ ಪೊಲೀಸ್ ಠಾಣೆಯ ಮೊ.ನಂ. 296/2025 ಕಲಂ 8(ಸಿ), 22(ಸಿ), 29 ಎನ್.ಡಿ.ಪಿ.ಎಸ್ ಕಾಯ್ದೆ-1985 ಮತ್ತು ಕಲಂ 111 ಬಿ.ಎನ್.ಎಸ್. ಕಾಯ್ದೆ 2023 ರ ಪ್ರಕರಣದಲ್ಲಿ ದಸ್ತಗಿರಿಯಾಗಿದ್ದ ಮುಂಬೈ ನಿವಾಸಿಯಾದ ಆರೋಪಿ ಸಲೀಂ ಇಮ್ತಿಯಾಜ್ ಶೇಖ್, ವಯಸ್ಸು 47 ವರ್ಷ ಈತನು ನೀಡಿದ ಹೇಳಿಕೆಯಲ್ಲಿ ಮೈಸೂರು ನಗರದಲ್ಲಿ ಮೊದಲ ಬಾರಿಗೆ ಜುಲೈ ಮೊದಲನೇ ವಾರದಲ್ಲಿ ಮಾದಕ ವಸ್ತು ತಯಾರಿಸುವ ಘಟಕವನ್ನು ಪ್ರಾರಂಭಿಸಿರುವುದಾಗಿ ತಿಳಿಸಿದ ಮೇರೆಗೆ, ಮುಂಬೈ ನಗರದ ಸಾಕಿನಾಕ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಮೈಸೂರು ನಗರ ನರಸಿಂಹರಾಜ ಪೊಲೀಸ್ ಠಾಣೆಯ ಠಾಣಾಧಿಕಾರಿಗಳೊಂದಿಗೆ ದಿನಾಂಕ: 26/07/2025 ರಂದು ಜಂಟಿ ಕಾರ್ಯಾಚರಣೆ ನಡೆಸಿ ಮಾದಕ ವಸ್ತು ತಯಾರಿಸುವ ಘಟಕವನ್ನು ಪತ್ತೆ ಮಾಡಿ 04 ಜನ ಆರೋಪಿಗಳನ್ನು ದಸ್ತಗಿರಿ ಮಾಡಿರುತ್ತಾರೆ. ಸದರಿ ಘಟನೆಗೆ ಸಂಬಂಧಿಸಿದಂತೆ ಬೀಟ್ ಹಾಗೂ ಗುಪ್ತ ಮಾಹಿತಿ ಸಂಗ್ರಹಿಸುವ ಸಿಬ್ಬಂದಿಗಳು ಮಾಹಿತಿ ಸಂಗ್ರಹಿಸುವಲ್ಲಿ ವಿಫಲತೆ ಹೊಂದಿರುವುದರಿಂದ ಇವರುಗಳನ್ನು ಅಮಾನತ್ತುಗೊಳಿಸಲಾಗಿದೆ.

ಮೈಸೂರು ನಗರದಲ್ಲಿ ಕಳೆದ 3 ವರ್ಷಗಳಲ್ಲಿ ವರದಿಯಾಗಿರುವ ಪ್ರಕರಣಗಳ ಸಂಖ್ಯೆ, ಬಂಧಿಸಿರುವ ಆರೋಪಿಗಳು ಮತ್ತು ವಶಪಡಿಸಿಕೊಂಡಿರುವ ಮಾದಕ ವಸ್ತುಗಳ ಪ್ರಮಾಣ ಮತ್ತು ಅಂದಾಜು ಮೌಲ್ಯದ ವಿವರ ಈ ಕೆಳಕಂಡಂತಿದೆ:-

| Year | Reported | Accused | GANJA in KGs | SYNTHETIC DRUGS (Grams) | Value of the Drugs |
|---|---|---|---|---|---|
| 2023 | 62 | 119 | 227.809 | 356.039 | 68,44,660 |
| 2024 | 43 | 81 | 379.312 | 143.85 | 1,02,45,050 |
| 2025 | 326 | 361 | 101.193 | 153.165 | 26,89,875 |

**ರಾಜ್ಯದಲ್ಲಿ ಮಾದಕ ವಸ್ತುಗಳ ಸೇವನೆ, ಮಾರಾಟವನ್ನು ತಡೆಗಟ್ಟಲು ಹಾಗೂ ಮಾದಕ ಮುಕ್ತ ರಾಜ್ಯವನ್ನಾಗಿ ಮಾಡಲು ಸರ್ಕಾರವು ತೆಗೆದುಕೊಂಡ <u>ಕ್ರಮಗಳು ಈ ಕೆಳಕಂಡಂತಿದೆ:</u>**

- ರಾಜ್ಯದಲ್ಲಿ ಮಾದಕ ವಸ್ತುಗಳ ನಿಯಂತ್ರಣ ಕುರಿತಂತೆ, ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/141/ಪಿಓಪಿ/2025 ದಿನಾಂಕ: 02/08/2025ರಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಗಳಲ್ಲಿ ನಾರ್ಕೋಟಿಕ್ಸ್ ಸಂಬಂಧ ದಾಖಲಾಗುವ ಪ್ರಕರಣಗಳ ಮೇಲ್ವಿಚಾರಣೆಗಾಗಿ ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ (Anti Narcotics Task Force) ಘಟಕವನ್ನು ಸೃಜಿಸಲಾಗಿದೆ. ಈ ಕಾರ್ಯ ಪಡೆಯು ದಿನಾಂಕ:02.08.2025 ರಂದು ರಚನೆಯಾಗಿರುತ್ತದೆ.

- ಮಾದಕ ಬೆಳೆಗಳ ಗುರುತಿಸುವಿಕೆ ಮತ್ತು ನಾಶ, ಅಕ್ರಮ ಮಾದಕ ವ್ಯಸನವನ್ನು ಪತ್ತೆ ಹಚ್ಚಲು ಮತ್ತು ನಿರ್ಮೂಲನೆ ಮಾಡಲು ರಾಜ್ಯಾದ್ಯಂತ ಪೊಲೀಸ್ ಸಿಬ್ಬಂದಿಗೆ NCB (ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ) ಆನ್‌ಲೈನ್ ಕಾರ್ಯಾಗಾರಗಳ ಮೂಲಕ ತರಬೇತಿ ನೀಡಲಾಗುತ್ತಿದೆ. ಈ ಉದ್ದೇಶಕ್ಕಾಗಿ NCB ಮೊಬೈಲ್ ಅಪ್ಲಿಕೇಶನ್/ವೆಬ್ ಪೋರ್ಟಲ್ MAPDRUGS ಅನ್ನು ಸಹ ಪರಿಚಯಿಸಲಾಗಿದೆ.

- ಮಾದಕವಸ್ತು ಸಂಬಂಧಿತ ಪ್ರಕರಣಗಳಲ್ಲಿ ರಾಜ್ಯ ಪೊಲೀಸರ ತನಿಖಾ ಸಾಮರ್ಥ್ಯಗಳನ್ನು ಹೆಚ್ಚಿಸಲು NCB ಮತ್ತು ಇತರ ಏಜೆನ್ಸಿಗಳ ಸಹಯೋಗದೊಂದಿಗೆ ಆರು ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ. ಉಪ ಅಧೀಕ್ಷಕರವರಿಗೆ (ಡಿವೈಎಸ್ಪಿ), ಪೊಲೀಸ್ ನಿರೀಕ್ಷಕರು ಮತ್ತು ಅಬಕಾರಿ ಅಧಿಕಾರಿಗಳಿಗೆ ವಿಶೇಷ ತರಬೇತಿಯನ್ನು ನೀಡಲಾಗಿರುತ್ತದೆ. ಮತ್ತಷ್ಟು ಸಾಮರ್ಥ್ಯ ನಿರ್ಮಾಣ ಕಾರ್ಯಾಗಾರಗಳನ್ನು ಯೋಜಿಸಲಾಗಿದೆ.

- ತರಬೇತಿ ಕಾರ್ಯಕ್ರಮಗಳು:- ಸಿಐಡಿ ಅಧಿಕಾರಿಗಳನ್ನು ಭೋಪಾಲ್ ನಲ್ಲಿರುವ ಸೆಂಟ್ರಲ್ ಅಕಾಡೆಮಿ ಫಾರ್ ಪೊಲೀಸ್ ಟ್ರೈನಿಂಗ್ (ಸಿಎಪಿಟಿ) ತರಬೇತುದಾರರಿಗಾಗಿ ತರಬೇತಿ (TOT) ಹಾಗೂ ಮಾದಕ ದ್ರವ್ಯ ತನಿಖೆಯ ಮೇಲೆ ಕೇಂದ್ರೀಕರಿಸಿದ ಕಾರ್ಯಕ್ರಮಗಳಿಗೆ ಕಳುಹಿಸಲಾಗಿದೆ. NDPS ಕಾಯ್ದೆ (Narcotic Drugs and Psychotropic Substances Act-1985) ಕುರಿತು ಇತರೆ ಸಿಬ್ಬಂದಿಗೆ ಪೊಲೀಸ್ ತರಬೇತಿ ಶಾಲೆಗಳಲ್ಲಿ ಇದೇ ರೀತಿಯ ತರಬೇತಿಯನ್ನು ನೀಡಲಾಗುತ್ತಿದೆ.

- ಬೆಂಗಳೂರು ಪೊಲೀಸರು ಅಕ್ರಮ ಮಾದಕ ದ್ರವ್ಯ ಚಟುವಟಿಕೆಗಳಲ್ಲಿ ತೊಡಗಿರುವ ವಿದೇಶಿಗರು ವಾಸಿಸುವ ಪ್ರದೇಶಗಳ ಮೇಲೆ ಸೂಕ್ತ ನಿಗಾ ವಹಿಸಿ ಅಕ್ರಮ ಚಟುವಟಿಕೆ ಮೇಲೆ ನಿಯಂತ್ರಣ ಸಾಧಿಸಲಾಗಿದೆ.

- ಮಾದಕ ದ್ರವ್ಯ ಸೇವನೆ, ಮಾರಾಟ, ಸಂಗ್ರಹಣೆ ಮತ್ತು ಸರಬರಾಜು ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವ ಸಲುವಾಗಿ ಸಿಐಡಿ ಘಟಕದಲ್ಲಿ ವಿಶೇಷ ತರಬೇತಿ ನೀಡುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈಗಾಗಲೇ ರಾಜ್ಯದಲ್ಲಿ 167 ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿದೆ.

- ಜೂನ್ 26, 2025 ರಂದು "ಡ್ರಗ್ಸ್ ದುರುಪಯೋಗ ಮತ್ತು ಅಕ್ರಮ ಸಾಗಣಿಕೆ ವಿರುದ್ಧ ಅಂತರ ರಾಷ್ಟ್ರೀಯ ದಿನಾಚರಣೆ" ಅಂಗವಾಗಿ ಸುಮಾರು 4000 ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಗಾರ ಆಯೋಜಿಸಿ ತಿಳುವಳಿಕೆ ನೀಡಲಾಗಿದೆ.

- Drugs Free Karnataka Mobile App ಅನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿ, ಮಾದಕವಸ್ತು ಬಳಕೆ, ಸಂಗ್ರಹಣೆ, ಸರಬರಾಜು ಮೇಲೆ ನಿಯಂತ್ರಣ ಸಾಧಿಸುವ ನಿಟ್ಟಿನಲ್ಲಿ ದಿಟ್ಟ ಕ್ರಮಕೈಗೊಳ್ಳಲಾಗುತ್ತಿದೆ.

- NDPS ಪ್ರಕರಣಗಳಲ್ಲಿನ ಆರೋಪಿಗಳ ಮಾಹಿತಿಯನ್ನು ಪೊಲೀಸ್ ಐಟಿ ತಂತ್ರಾಂಶ- National Integrated Database on Arrested Narco Offenders - NIDAAN ಪೋರ್ಟಲ್‌ನಲ್ಲಿ ದಾಖಲಿಸಿ ನಿರ್ವಹಿಸಲಾಗುತ್ತಿದೆ. ಆರೋಪಿಗಳ ದತ್ತಾಂಶ ವಿಶ್ಲೇಷಣೆ ಮಾಡಿ ಆರೋಪಿಗಳ ಚಲನವಲನಗಳ ಮೇಲೆ ನಿಗಾವಹಿಸಲಾಗಿದೆ.

- ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ NCORD (Narcotics Co- ordination) ಸಮಿತಿ ರಚನೆಗೊಂಡಿರುತ್ತದೆ. NDPS ಕಾಯ್ದೆ ಜಾರಿಗೊಳಿಸುವ ಸಂಬಂಧ ಇತರೆ ಇಲಾಖೆಯ ಸಮನ್ವಯದೊಂದಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

- ಎನ್.ಡಿ.ಪಿ.ಎಸ್ ಪ್ರಕರಣಗಳಲ್ಲಿ ಭಾಗಿಯಾಗುವ ವಿದೇಶಿ ಪ್ರಜೆಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಭಾಗಿಯಾಗುವ ಆರೋಪಿಗಳನ್ನು Passport Act-1920, Foreigners Act-1946 & Foreigners Order-1948ರ ಅಡಿಯಲ್ಲಿ ಗಡಿಪಾರು ಪ್ರಕ್ರಿಯೆ ಕೈಗೊಳ್ಳಲು ಕ್ರಮ ಜರುಗಿಸಲಾಗುತ್ತಿದೆ.

- PITNDPS-1988ರ ಕಾಯ್ದೆ ಅನ್ವಯವಾಗುವ ಆರೋಪಿಗಳ ವಿರುದ್ಧ ನಿಯಾಮಾನುಸಾರ ಬಂಧನ ಕ್ರಮ ಜರುಗಿಸಿ ಮಾನ್ಯ PITNDPS ಸಲಹಾ ಮಂಡಳಿಯ ಮುಂದೆ ಬಂಧಿತ ಆರೋಪಿಯನ್ನು ಹಾಜರುಪಡಿಸಿ, ಮಾನ್ಯ ಸಲಹಾ ಮಂಡಳಿಯ ವರದಿಯನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.

- ಡ್ರಗ್ಸ್ ದಂಧೆಯನ್ನು ಸಂಪೂರ್ಣ ಮಟ್ಟ ಹಾಕಲು ಮತ್ತು ಪೆಡ್ಲರ್‌ಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು NDPS-1985/PITNDPS-1988 ರ ಕಾಯ್ದೆಗಳು ಮತ್ತು ನಿಯಮಗಳಡಿಯಲ್ಲಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ.

- ಕರ್ನಾಟಕ ರಾಜ್ಯವನ್ನು ದುರುಪಯೋಗದಿಂದ ಮುಕ್ತಗೊಳಿಸುವುದಕ್ಕೆ, ಯುವ ಜನತೆಗೆ ನಶೆಯಿಂದ ಉಂಟಾಗುವ ದೈಹಿಕ, ಮಾನಸಿಕ, ಸಾಮಾಜಿಕ ಹಾನಿಗಳ ಬಗ್ಗೆ ಜಾಗೃತಿ ಮೂಡಿಸುವುದಕ್ಕೆ, ಪುನರ್ವಸತಿ, ಕೇಂದ್ರಗಳು, ಸಲಹಾ ಕೇಂದ್ರಗಳು ಮತ್ತು ಸಲಹಾ ಸೇವೆಗಳ ಮೂಲಕ ಪೀಡಿತ ವ್ಯಸನಿಗಳನ್ನು ಸಮಾಜದಲ್ಲಿ ಮರುಸ್ಥಾಪಿಸುವುದಕ್ಕೆ ಸಮುದಾಯದ ಭಾಗವಹಿಸುವಿಕೆ ಮೂಲಕ ಪರಿಹಾರ ಸಾಧಿಸುವುದಕ್ಕೆ, ನಿರಂತರವಾಗಿ ಇತರೆ ಎಲ್ಲಾ ಇಲಾಖೆಗಳ ಸಹಭಾಗಿತ್ವ ಮತ್ತು ಸಮನ್ವಯದೊಂದಿಗೆ ಶ್ರಮಿಸುತ್ತಿರುತ್ತದೆ.

ಒಇ 54 ಪಿಎನ್‌ಡಿ 2025 (ಇ)

(ಡಾ: ಜಿ . ಪರಮೇಶ್ವರ)
ಗೃಹ ಸಚಿವರು